ಕರ್ನಾಟಕ ಸರ್ಕಾರ

**ಮಕ್ಕಳ ರಕ್ಷಣಾ ನಿರ್ದೇಶನಾಲಯ**

**ವಿಶ್ವೇಶ್ವರಯ್ಯಚಿಕ್ಕಗೋಪುರ 3ನೇ ಮಹಡಿ, ಡಾ॥ ಬಿ.ಆರ್. ಅಂಬೇಡ್ಕರ್ ವೀದಿ,**

**ಬೆಂಗಳೂರು-560001 E-Mail Id:icps.kar@gmail.com**

ಸಂಖ್ಯೆ:ಮರನಿ/ಆಡಳಿತ/ಎಂಐಎಸ್-23/2021-22 ದಿನಾಂಕ: 31-05-2021

## ಸುತ್ತೋಲೆ

ವಿಷಯ: ಮಕ್ಕಳ ರಕ್ಷಣಾ ನಿರ್ದೇಶನಾಲಯದಲ್ಲಿ ಕೋವಿಡ್-19 ವಿಪತ್ತು ನಿರ್ವಹಣಾ ಕೋಶ ರಚಿಸುವ ಕುರಿತು.

*******

ಮಕ್ಕಳ ರಕ್ಷಣಾ ನಿರ್ದೇಶನಾಲಯದ ಅಡಿಯಲ್ಲಿ ಕೋವಿಡ್-19 ಹಿನ್ನೆಲೆಯಲ್ಲಿ ಆಯಾ ಜಿಲ್ಲೆಗಳಲ್ಲಿನ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಎಲ್ಲಾ ಕೋವಿಡ್ ವಿಪತ್ತು ನಿರ್ವಹಣಾ ವಿಷಯಗಳ ಕುರಿತು ಕೆಳಕಂಡಂತೆ ನೋಡಲ್ ಅಧಿಕಾರಿಗಳನ್ನು ನೇಮಿಸಿ ಕೋವಿಡ್-19 ವಿಪತ್ತು ನಿರ್ವಹಣಾ ಕೋಶವನ್ನು ರಚಿಸಲಾಗಿದೆ.

ಶ್ರೀಮತಿ. ಬಿ. ಎಸ್. ಭಾರತಿದೇವಿ, ಕಾರ್ಯಕ್ರಮ ವ್ಯವಸ್ಥಾಪಕರು (ಸಾರಾ) ಮತ್ತು ಪ್ರಭಾರ ಯೋಜನಾ ನಿರ್ದೇಶಕರು(9986661104) ಇವರನ್ನು ಕೋವಿಡ್ ವಿಪತ್ತು ನಿರ್ವಹಣಾ ಕೋಶದ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

**" ಮಕ್ಕಳ ರಕ್ಷಣೆಗೆ ಕೋವಿಡ್ ವಿಪತ್ತು ನಿರ್ವಹಣಾ ಕೋಶ"**

| ಕ್ರ.ಸಂ. | ಕೋವಿಡ್ 19 ಹಿನ್ನೆಲೆಯಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳಿಗೆ ನೇಮಿಸಲಾದ **"ಕೋವಿಡ್ ಮಕ್ಕಳ ರಕ್ಷಣಾ ನೋಡಲ್ ಅಧಿಕಾರಿ"**ಗಳ ಹೆಸರು ಮತ್ತು ಪದನಾಮ | ಕೋವಿಡ್ 19 ಹಿನ್ನೆಲೆಯಲ್ಲಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಎಂ.ಐ.ಎಸ್‌ಗೆ ನೇಮಿಸಲಾದ **"ಎಂ.ಐ.ಎಸ್. ನೋಡಲ್ ಅಧಿಕಾರಿ"**ಗಳ ಹೆಸರು ಮತ್ತು ಪದನಾಮ | ಹಂಚಿಕೆ ಮಾಡಲಾದ ಜಿಲ್ಲೆಗಳು |
|---|---|---|---|
| 1. | ಶ್ರೀಮತಿ. ಬಿ. ಎಸ್. ಭಾರತಿದೇವಿ<br>ಕಾರ್ಯಕ್ರಮ ವ್ಯವಸ್ಥಾಪಕರು (ಸಾರಾ) ಮತ್ತು ಪ್ರಭಾರ ಯೋಜನಾ ನಿರ್ದೇಶಕರು (9986661104) | ಕು.ಯಲ್ಲವ್ವ ಹಂಡಿ<br>ಸಂಶೋಧನಾಧಿಕಾರಿ (7204861203)<br>ಅನ್ನಪೂರ್ಣ<br>ಎಂಐಎಸ್ ನೋಡಲ್ ಅಧಿಕಾರಿಗಳ ಸಹಾಯಕರು (8884166445) | ಬಾಗಲಕೋಟೆ, ಬೆಂಗಳೂರು(ನಗರ), ಬೆಂಗಳೂರು(ಗ್ರಾ) ಬೆಳಗಾಂ, ಬಳ್ಳಾರಿ, ಬೀದರ್, ಚಿತ್ರದುರ್ಗ, ಚಾಮರಾಜನಗರ, ಚಿಕ್ಕಬಳ್ಳಾಪುರ ಮತ್ತು ಚಿಕ್ಕಮಗಳೂರು ಜಿಲ್ಲೆಗಳು. |
| 2. | ಶ್ರೀಮತಿ. ಜಗನ್ಮೋಹಿನಿ. ಸಿ.<br>ಕಾರ್ಯಕ್ರಮ ವ್ಯವಸ್ಥಾಪಕರು (ಮರ) (9945038097) | ಶ್ರೀಮತಿ ಲಲಿತ ಹೆಚ್.ಎಂ.<br>ಪ್ರಥಮ ದರ್ಜೆ ಸಹಾಯಕರು (9886365810)<br>ಶ್ರೀಮತಿ ಗ್ಲೀಶ ಮೊಂತೆರೊ<br>ಎಂಐಎಸ್ ನೋಡಲ್ ಅಧಿಕಾರಿಗಳ ಸಹಾಯಕರು(9901274680) | ದಕ್ಷಿಣ ಕನ್ನಡ, ದಾವಣಗೆರೆ, ಧಾರವಾಡ, ಗದಗ, ಕಲ್ಬುರ್ಗಿ, ಹಾಸನ, ಹಾವೇರಿ, ಕೊಡಗು, ಕೊಪ್ಪಳ ಮತ್ತು ಕೋಲಾರ ಜಿಲ್ಲೆಗಳು. |

| | | | |
|---|---|---|---|
| 3. | ಶ್ರೀಮತಿ. ನಿವೇದಿತಾ ಎಸ್. ಕಾರ್ಯಕ್ರಮ ಅಧಿಕಾರಿ(ಮರ) (9740399666) | ಶ್ರೀ. ವೇಣುಗೋಪಾಲ್ ದ್ವಿತೀಯ ದರ್ಜೆ ಸಹಾಯಕರು (ಸಾರ) (6360037719)<br>ಶ್ರೀ ಯೋಗೇಶ್<br>ಎಂಐಎಸ್ ನೋಡಲ್ ಅಧಿಕಾರಿಗಳ ಸಹಾಯಕರು (9900943524) | ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಉತ್ತರ ಕನ್ನಡ, ವಿಜಯಪುರ ಮತ್ತು ಯಾದಗಿರಿ ಜಿಲ್ಲೆಗಳು. |

**ಕೋವಿಡ್ ಹಿನ್ನೆಲೆಯಲ್ಲಿ ಮಕ್ಕಳ ರಕ್ಷಣಾ ಮಾಹಿತಿ ನಿರ್ವಹಣಾ ಕೋಶ**

| ಕ್ರ.ಸಂ. | ಕರ್ತವ್ಯದ ವಿವರ | ನಿಯೋಜಿಸಲ್ಪಟ್ಟ ಅಧಿಕಾರಿಗಳ ಹೆಸರು ಮತ್ತು ಪದನಾಮ |
|---|---|---|
| 1 | ಮಾಹಿತಿ ಸಂಗ್ರಹಣೆ ಮತ್ತು ವಿಂಗಡಣೆ | ಶ್ರೀ.ಶೈಲೇಶ್ ಕುಮಾರ್ , ಎಮ್.ಐ.ಎಸ್ ಸಮಾಲೋಚಕರು, ಯೂನಿಸೆಫ್. (7259140375) |
| 2 | ಮಾಹಿತಿ ಪ್ರಸಾರ (ಎಲ್ಲಾ ಮೇಲಾಧಿಕಾರಿಗಳಿಗೆ ಹಾಗೂ ಪ್ರಸಾರ ಮಾಧ್ಯಮಗಳಿಗೆ) | ಶ್ರೀಮತಿ. ಜಗನ್ಮೋಹಿನಿ. ಸಿ. ಕಾರ್ಯಕ್ರಮ ವ್ಯವಸ್ಥಾಪಕರು (ಮರ) (9945038097) |
| 3 | ಮಾಹಿತಿ ವಿಶ್ಲೇಷಣೆ (ಆಗಿಂದಾಗ್ಗೇ ಮಾಹಿತಿ ವಿಶ್ಲೇಷಣೆ ಮಾಡಿ ವಿಶ್ಲೇಷಣಾ ವರದಿ ನಿರ್ದೇಶಕರಿಗೆ ಸಲ್ಲಿಸುವುದು) | ಶ್ರೀಮತಿ. ಬಿ. ಎಸ್. ಭಾರತಿದೇವಿ ಕಾರ್ಯಕ್ರಮ ವ್ಯವಸ್ಥಾಪಕರು (ಸಾರಾ) ಮತ್ತು ಪ್ರಭಾರ ಯೋಜನಾ ನಿರ್ದೇಶಕರು (9986661104) |

1) ಆಯಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ಕೋವಿಡ್–19ಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಕುರಿತು ಸಂಬಂಧಪಟ್ಟ ನೋಡಲ್ ಅಧಿಕಾರಿಗಳೊಂದಿಗೆ ಕ್ಷೇತ್ರಮಟ್ಟದ ಸಮಸ್ಯೆಗಳನ್ನು ಚರ್ಚಿಸಲು ಹಾಗೂ ಮಾರ್ಗದರ್ಶನ ಪಡೆದುಕೊಳ್ಳಲು ಹಾಗೂ ಕೋವಿಡ್–19ಗೆ ಸಂಬಂಧಪಟ್ಟ ಎಲ್ಲಾ ವಿಷಯಗಳ ಕುರಿತು ತಕ್ಷಣ ವರದಿ ಸಲ್ಲಿಸಲು ನಿರಂತರ ಸಂಪರ್ಕದಲ್ಲಿರತಕ್ಕದ್ದು.
2) ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳು ಕೋವಿಡ್–19ಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಮಾಹಿತಿಯನ್ನು ನೇಮಕಗೊಂಡ ಎಂ.ಐ.ಎಸ್. ನೋಡಲ್ ಅಧಿಕಾರಿಗಳಿಗೆ ಸಕಾಲದಲ್ಲಿ ಸಲ್ಲಿಸತಕ್ಕದ್ದು.
3) ***ಜಿಲ್ಲಾ ಮಕ್ಕಳ ರಕ್ಷಣಾ ಘಟಕಗಳಾಗಲೀ ಅಥವಾ ಮಕ್ಕಳ ಕಲ್ಯಾಣ ಸಮಿತಿಗಳಾಗಲೀ ಕೋವಿಡ್‌ನಿಂದ ಅನಾಥರಾದ ಮಕ್ಕಳ ಮಾಹಿತಿಯನ್ನು ಮಾಹಿತಿ ತಿಳಿದ ಕೂಡಲೇ ನೋಡಲ್ ಅಧಿಕಾರಿಗಳ ಗಮನಕ್ಕೆ ತರತಕ್ಕದ್ದು.***
4) **"ಕೋವಿಡ್ ಮಕ್ಕಳ ರಕ್ಷಣಾ ನೋಡಲ್ ಅಧಿಕಾರಿ"**ಗಳು ತಮಗೆ ವಹಿಸಲಾದ ಜಿಲ್ಲೆಗಳಲ್ಲಿ ಕೋವಿಡ್ ಬಾಧಿತ ಹಾಗೂ ಸೋಂಕಿತ ಮಕ್ಕಳಿಗೆ ಸರ್ಕಾರದಿಂದ ಅವಶ್ಯವಿರುವ ಎಲ್ಲಾ ಪಾಲನೆ ಮತ್ತು ರಕ್ಷಣೆ ಹಾಗೂ ಪುನರ್ವಸತಿ ಜವಾಬ್ದಾರಿಯನ್ನು ನಿರ್ವಹಿಸತಕ್ಕದ್ದು.
5) **"ಎಂ.ಐ.ಎಸ್. ನೋಡಲ್ ಅಧಿಕಾರಿ"ಗಳು** ಆಗಿಂದಾಗ್ಗೆ ತಮಗೆ ವಹಿಸಲಾದ ಜಿಲ್ಲೆಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಮೇಲಾಧಿಕಾರಿಗಳಿಗೆ, ನ್ಯಾಯಾಲಯಗಳಿಗೆ ಹಾಗೂ ನೀತಿ ನಿಯಮಗಳನ್ನು ರೂಪಿಸಲು ಅಗತ್ಯವಿರುವ ಎಲ್ಲಾ ಮಾಹಿತಿಗಳನ್ನು ಸಕಾಲದಲ್ಲಿ ಸಂಗ್ರಹಿಸಿ ಶೈಲೇಶ್ ಕುಮಾರ್, ಎಂ.ಐ.ಎಸ್ ಸಮಾಲೋಚಕರು, ಯೂನಿಸೆಫ್ ಇವರೊಂದಿಗೆ ಸಹಕಾರ ಮತ್ತು ಸಮನ್ವಯದೊಂದಿಗೆ ಕರ್ತವ್ಯ ನಿರ್ವಹಿಸುವುದು.

6) ಕೋವಿಡ್ ಹಿನ್ನೆಲೆಯಲ್ಲಿ ಮಕ್ಕಳ ರಕ್ಷಣಾ ಮಾಹಿತಿ ನಿರ್ವಹಣಾ ಕೋಶದಲ್ಲಿ ಆಯಾ ಅಧಿಕಾರಿಗಳಿಗೆ ವಹಿಸಿದ ಕರ್ತವ್ಯಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಜವಾಬ್ದಾರಿಯಿಂದ ನಿರ್ವಹಿಸತಕ್ಕದ್ದು.

31.05.2021

ನಿರ್ದೇಶಕರು
ಮಕ್ಕಳ ರಕ್ಷಣಾ ನಿರ್ದೇಶನಾಲಯ
ಬೆಂಗಳೂರು.

<u>ಪ್ರತಿಯನ್ನು:</u>

1. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಬೆಂಗಳೂರು. ಇವರ ಮಾಹಿತಿಗಾಗಿ ಸಲ್ಲಿಸಿದೆ.
2. ಕೋವಿಡ್‌ನಿಂದ ಬಾಧಿತ ಮಕ್ಕಳಿಗೆ ರಾಜ್ಯ ಮಟ್ಟದ ನೋಡಲ್ ಅಧಿಕಾರಿ.
3. ಕೇಂದ್ರ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ ಹಾಗೂ ಸಿಬ್ಬಂದಿಗಳಿಗೆ.
4. ರಾಜ್ಯದ ಎಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳಿಗೆ.
5. ರಾಜ್ಯದ ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರಿಗೆ.
6. ಕಛೇರಿ ಪ್ರತಿ.